<u>ದಿನಾಂಕ **25.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟಿ ಸವಾಲು ಃ ವಾದಿ ಪರ ವಕೀಲರಿಂದ</u>

ನಾನು ಹೇಳುವಂತೆ 13.08.1973 ರಲ್ಲಿ ಆದಂತಹ ವಿಲ್ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವಿಲ್ ಬರೆಯುವ ಕಾಲಕ್ಕೆ ನನ್ನ ಮಾವನಾದ ಕಾಳೇಗೌಡರ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಿಲ್ಲನ್ನು ಸೃಷ್ಟಿಸಿದ್ದು ಕಾಳೇಗೌಡ ಮೃತ ಪಟ್ಟ ನಂತರ ಸೃಷ್ಟಿಸಿದಂತಹ ದಾಖಲಾತಿ ಎಂದರೆ ಸರಿಯಲ್ಲ. ದಾವಾ ಸ್ವತ್ತು ಕಾಳೇಗೌಡರ ಸ್ವಯಾರ್ಜಿತ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 5 ಅನ್ನು ಸೃಷ್ಟಿಸಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಾವನವರು ತೀರಿಕೊಂಡ ನಂತರ ಮನೆಯ ಯಜಮಾನಿಕೆ ಮಾಡುತ್ತಿದ್ದ ಅನುಸೂಯಮ್ಮರವರಿಗೆ ಶಿವಪ್ಪರವರಿಂದ ಖಾತೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದು ದಾವಾ ಷೆಡ್ಯೂಲ್ ಐಟಂ ನಂ. 3ಕ್ಕೆ ಸಂಬಂದಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯನ್ನು ದತ್ತಿಗೆ ತೆಗೆದುಕೊಂಡ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನನ್ನ ಮಾವನವರ ಕುಟುಂಬದವರ ವಾರಸುದಾರರನ್ನು ಪಕ್ಷಕಾರರನ್ನಾಗಿ ಮಾಡಿರುತ್ತೇನೆ ಎಂದರೆ ಮಾಡಿರುವುದಿಲ್ಲ ಕಾರಣ ಅವರಿಗೆ ಹಕ್ಕು ಇರುವುದಿಲ್ಲ ಎಂದು ಹೇಳುತ್ತಾರೆ. ಕುಟುಂಬದವರಿಗೆ ಮೋಸ ಮಾಡಬೇಕೆಂದು ಮೋಸದಿಂದ ಪತ್ರ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಯಾವ ಇಸವಿಯಲ್ಲಿ ಮದುವೆ ಆಗಿರುತ್ತೇನೆ ಎಂದರೆ 1971 ರಲ್ಲಿ. ವಾದಿಯವರು ದಾವಾ ಆಸ್ತಿಯಲ್ಲಿ ಹಕ್ಕುಳ್ಳವರಾಗಿದ್ದಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.